**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.4/23**

**ಸಿ.ಡಬ್ಲ್ಯೂ-1 ಪಿ.ಡಬ್ಲ್ಯೂ- 1**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವಿಂದನಾಯಕ್ |
| ತಂದೆಯ/ ಗಂಡನ ಹೆಸರು | : | ಅಂಕನಾಯಕ್ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬೀದರಹಳ್ಳಿ |

**ದಿನಾಂಕ 18.07.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-2, 3 ಅಣ್ಣ, ಚಾಸಾ-4 ಅಕ್ಕನ ಮಗ. ಚಾಸಾ-5 ಗೊತ್ತು. ಆರೋಪಿತರು ಗೊತ್ತು. ದಿಃ30.06.2022 ರಲ್ಲಿ ಮಧ್ಯಾಹ್ನ 11.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕುತ್ತಿದ್ದಾರೆ ಎಂದು ಬೇರೆಯವರು ತಿಳಿಸಿರುತ್ತಾರೆ. ನಾನು ನೋಡಲು ಹೋಗಿರುತ್ತೇನೆ. ನಾನು ನೋಡಿದಾಗ ಆರೋಪಿತರು 50 ತಂತಿ ಕಂಬಗಳನ್ನು ಮುರಿದು ತಂತಿ ಕತ್ತರಿಸಿರುತ್ತಾರೆ. ಅದನ್ನು ಕೇಳಿದಕ್ಕೆ ಆರೋಪಿ 2 ರವರು ಕಡಕತ್ತಿಯನ್ನು ತೆಗೆದು ಹಲ್ಲೆ ಮಾಡಲು ಯತ್ನಿಸಿದಾಗ ಅದು ಬೆರಳಿಗೆ ತಾಗಿರುತ್ತದೆ. ಹಿಂದೆಹಿಂದ ಯಾರೋ ದೊಣ್ಣೆಯಿಂದ ಬೆನ್ನಿಗೆ ಹೊಡೆದಿರುತ್ತಾರೆ. ಅಷ್ಟರಲ್ಲಿ ಚಾಸಾ-2 ಮತ್ತು 3 ಬಂದಿರುತ್ತಾರೆ. ಅವರಿಗೂ ಸಹ ಹೊಡೆದಿರುತ್ತಾರೆ ನಾನು ಪ್ರಜ್ಞೆ ತಪ್ಪಿದ್ದರಿಂದ ಯಾರು ಹೊಡೆದಿರುತ್ತಾರೆ ಎಂದು ಗೊತ್ತಾಗಿರುವುದಿಲ್ಲ, ನಂತರ ಚಾಸಾ-2

ರವರು ನನ್ನನ್ನು ಸರಗೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತಾರೆ. ಅದೇ ದಿನ ದೂರು ದಾಖಲಿಸಿರುತ್ತೇನೆ. ಸದರಿ ದೂರನ್ನು ನಿಪಿ-1 ಮತ್ತು ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಕೃತ್ಯಕ್ಕೆ ಬಳಸಿದ ಮುರಿದ ಕಂಬ, ದೊಣ್ಣೆ ಮತ್ತು ಮಚ್ಚನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಕ್ರಮವಾಗಿ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

## ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸರ್ವೇ ನಂ 4 ರಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ಆರೋಪಿತರು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿ 5 ರವರು ಕುಮ್ಮಕು ನೀಡಿರುತ್ತಾರೆ ಎಂದರೆ ಸರಿ. ಆರೋಪಿತರು ಕಲ್ಲು ಕಂಬಗಳನ್ನು ಮುರಿದು 30 ಸಾವಿರ ನಷ್ಟ ಮಾಡಿರುತ್ತಾರೆ ಎಂದರೆ ಸರಿ.

## ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾಸಾ-2 ರವರ ಇಬ್ಬರು ಮಕ್ಕಳು ಪೊಲೀಸ್ ಎಂದರೆ ಸರಿ. ಚಿಕ್ಕ ಎಂಬುವವರು ಆರೋಪಿತರ ಜಮೀನಿನಲ್ಲಿ ಕಲ್ಲು ಕಂಬಗಳನ್ನು ಕಿತ್ತಾಕುತ್ತಿರುವ ವಿಷಯ ತಿಳಿಸಿರುತ್ತಾರೆ. ಚಿಕ್ಕ ಎಂಬುವವರು ನನಗೆ ಸಂಬಂಧಿಕರು ಅಲ್ಲ. ಸದರಿ ದಿನ ಅಕ್ಕ ಪಕ್ಕ ಜಮೀನಿನವರು ಕೆಲಸ ಮಾಡುತ್ತಿದ್ದಾರಾ ಎಂದರೆ ಮಳೆ ಬೀಳುತ್ತಿದ್ದರಿಂದ ನನಗೆ ಕಾಣಲಿಲ್ಲ ಎಂದು ನುಡಿಯುತ್ತಾರೆ. ಕಲ್ಲು ಮುರಿದಿರುವ ಬಗ್ಗೆ ಛಾಯಾಚಿತ್ರಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ಮನೆಯಿಂದ ಸದರಿ ಜಮೀನಿಗೆ ಅರ್ಧ ಕೀ.ಮೀ ಆಗುತ್ತದೆ. ಆರೋಪಿತರು ಆ ರೀತಿ ಯಾವುದೇ ಕೃತ್ಯ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯರ ಮುಂದೆ ಹೇಳಿರುತ್ತೇನೆ. ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡರಾ ಎಂದರೆ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. 2 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಚಾಸಾ-2 ರವರಿಗೆ ಹೊಡೆದಿರುತ್ತಾರೆ ಎಂದು ದೂರಿನಲ್ಲಿ ಹೇಳಿರುತ್ತೇನೆ. ನಿಪಿ-1 ನ್ನು ನನ್ನ ಅಣ್ಣ ಬರೆಸಿರುತ್ತಾರೆ. ನಿಪಿ-1

ರಲ್ಲಿ ಇರುವ ವಿಚಾರ ಗೊತ್ತಿಲ್ಲ ಎಂದರೆ ಸರಿ. ಚಿಕ್ಕ ಎಂಬುವರು ವಿಷಯ ತಿಳಿಸಿರುತ್ತಾರೆ ಎಂದು ದೂರಿನಲ್ಲಿ ಬರೆಸಿಲ್ಲ. ಸುಮಾರು 10 ವರ್ಷಗಳ ಹಿಂದೆ ನನ್ನ ಜಮೀನಿಗೆ ಬೇಲಿ ಹಾಕಿಸಿರುತ್ತೇನೆ ರಸೀದಿಗಳನ್ನು ಹಾಜರುಪಡಿಸಿಲ್ಲ. ಸದರಿ ಸಮಯದಲ್ಲಿ ಜಮೀನಿನಲ್ಲಿ ಜೋಳ ಮತ್ತು ರಾಗಿ ಬೆಳೆದಿರುತ್ತೇನೆ. ಆರೋಪಿತರು ನನ್ನ ವಿರುದ್ದವು ಸಹ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ OS 188/22 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಚಾಸಾ-2 ರವರು ಕೊಟ್ಟಿರುತ್ತಾರೆ. ಮುದ್ದೆಮಾಲುಗಳು ಈ ಪ್ರಕರಣಕ್ಕೆ ಸಂಬಂಧ ಇಲ್ಲದಿದ್ದರೂ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಕಲ್ಲು ಕಂಬ ಖರೀದಿ ಮಾಡಿದ ಸಮಯದಲ್ಲಿ ಅದರ ಬೆಲೆ ಒಂದು ಕಂಬಕ್ಕೆ 150/- ಇತ್ತು. ಆರೋಪಿತರು ಕಲ್ಲು ಕಂಬಗಳನ್ನು ಮುರಿದು ನಷ್ಟ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಜಮೀನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**